ಹೀಗಿದೆ; ಬೀಜದಲ್ಲಿರುವ ಅಂಡಾಶಯವನ್ನು ಎರಡನೇ ಬೆಳೆಗೆ ಬಿತ್ತಲು ಬಾರದಂತೆ ನಾಶ ಮಾಡುವುದು, ಕಂಪನಿ ತಯಾರಿಸಿದ ಬೀಜಗಳು ಮಾರಾಟವಾಗುವಂತೆ ಮಾಡಿ ಆಹಾರದ ಮೇಲೆ ಏಕಸ್ವಾಮ್ಯ ಸಾಧಿಸುವುದು, ಎರಡೂವರೆ ಲಕ್ಷ ದೇಸಿ ತಳಿಗಳನ್ನು ನಾಶಮಾಡುವುದು. ಕಥೆ ನಮ್ಮ ಕಲಿಕೆ ಮತ್ತು ಬಳಕೆಯನ್ನು ಪರೀಕ್ಷಿಸತೊಡಗಿದೆ. ಇವೆರಡರ ನಡುವಿನ ಅಮಾನುಷ ಸಂಬಂಧದ ಅರ್ಥ ತಡಕಾಡುತ್ತಿದೆ.

ಮಹಾಂತೇಶರ ಮತ್ತೊಂದು ಶೈಲಿಯ ಕಥೆಗಳೆಂದರೆ – 'ವಿಭವಾಂತರ', 'ಪ್ರೀತಿ ನದಿಯಾಗುವ ಕಾಲ', 'ಅಶ್ವಗಂಧದ ಹಾದಿ', 'ಕೆಂಪು ನದಿ ಸಮುದ್ರ ಸೇರಲಿಲ್ಲ', 'ನಿಮ್ಮ ಕೆರವಿಂಗೆ ಎನ್ನ ಶಿರ ಸರಿಯೆ' ಮತ್ತು 'ಯುದ್ಧ ಭೂಮಿಯ ಭಾಷೆ'. ಇದರಲ್ಲಿ ಮೊದಲ ಎರಡು ಕಥೆಗಳು ಪ್ರೇಮದ ಸುತ್ತ ಹರಡಿಕೊಂಡಿವೆ. ಮನುಷ್ಯ ಸಂಬಂಧಗಳ ಏರಿಳಿತವನ್ನೂ, ದಣಿವನ್ನೂ ಕಾಣಿಸಿವೆ. ಮೊದಲನೆಯ ಕಥೆಯಲ್ಲಿ ಪ್ರೇಮ ವಿಚಿತ್ರ ತಿರುವು ಪಡೆದಿದೆ. ಇಬ್ಬರೂ ವೈದ್ಯಕೀಯ ವಿದ್ಯಾರ್ಥಿಗಳು. ಹುಡುಗನ ತಂದೆ ಮತ್ತು ತಾತ ಪ್ರಸಿದ್ಧ ವೈದ್ಯರು. ನೂರಾರು ಭ್ರೂಣಗಳನ್ನು ನಾಶ ಮಾಡಿದವರು. ಅಬಾರ್ಶನ್ ಮಾಡುವಲ್ಲಿ ಸುತ್ತಲಿನ ಹಳ್ಳಿಗಳಿಗೆ ಪ್ರಸಿದ್ಧರು. ಹುಡುಗನ ಇಂಥ ಹಿನ್ನೆಲೆಯನ್ನು ಕೇಳಿದ ಹುಡುಗಿ ತನ್ನ ಬಾಲ್ಯಕ್ಕೆ ಸರಿಯುತ್ತಾಳೆ. ಅಪ್ಪ ಏಕತಾರಿ ನುಡಿಸುತ್ತಿದ್ದ. ಅಜ್ಜಿ ಸೂಲಗಿತ್ತಿ. ನಮ್ಮ ಪೂರ್ವಜರದು ಸೃಷ್ಟಿಸುವ ವಿದ್ಯೆಯೇ ಹೊರತು, ನಾಶ ಮಾಡುವ ವಿದ್ಯೆಯಲ್ಲ ಎಂದು ನಿಟ್ಟುಸಿರುಬಿಡುತ್ತಾಳೆ. ಅವನೊಂದಿಗಿನ ಪ್ರೇಮ ಅಸಾಧ್ಯವೆನಿಸಿಬಿಡುತ್ತದೆ. ಏಕತಾರಿ ನುಡಿಸುತ್ತ ಮೈಮರೆಯುತ್ತಾಳೆ. ತಾನೀಗ ಎಂಥ ವಿದ್ಯೆಯ ಜೊತೆ ಗುರುತಿಸಿಕೊಳ್ಳಬೇಕೆಂದು ಹಲವು ಬಾರಿ ಪ್ರಶ್ನಿಸಿಕೊಳ್ಳುತ್ತಾಳೆ. ಕೊನೆಗೆ ತನ್ನ ಪೂರ್ವಜರು ಸೃಷ್ಟಿಸುವ ವಿದ್ಯೆ ಅವಳ ಆಯ್ಕೆ ಆಗಿಬಿಡುತ್ತದೆ.

'ಪ್ರೀತಿ ನದಿಯಾಗುವ ಕಾಲ' ಕಥೆಯಲ್ಲೂ ಹಲವು ವರ್ಷಗಳ ನಂತರ ಭೇಟಿಯಾಗುವ ಪ್ರೇಮಿಗಳ ಚಿತ್ರಣವಿದೆ. ಅವರು ನೆನಪು, ನೋವು, ಹೊಸ ಸಂಗಾತಿಗಳ ಇರುವು ಕಥೆಯ ಒಡಲನ್ನು ಸಂಕೀರ್ಣಗೊಳಿಸಿದೆ. ಪ್ರೇಮ ಮರೆತಷ್ಟೂ ಚಿಗುರುವ ಪವಾಡವನ್ನು ಹೇಳುವ ಕಥೆಯಿದು.

ಮಹಾಂತೇಶ ನವಲಕಲ್‌ರ ಮೊದಲ ಮಾದರಿಯ ಕಥೆಗಳನ್ನು ಹೋಲಿಸಿದರೆ ಪ್ರೇಮದ ಕಥೆಗಳು ದಟ್ಟವಾದ ಮೈ ಪಡೆದಿಲ್ಲ. ಮಾರುಕಟ್ಟೆಯ ಇವಿಲ್ ಹಿಡಿದಿಟ್ಟಂತೆ ಪ್ರೇಮದ ಭಾವಾರ್ದ್ರತೆಯನ್ನು ಹಿಡಿಯಲಾಗಿಲ್ಲ. ಅವರ ಕಥೆಗಳು ಮಾರುಕಟ್ಟೆಯ ಕತ್ತಲ ಕೂಪವನ್ನು ಹಾಯ್ದುಹೋಗಿವೆ. ಆದರೆ, ಪ್ರೇಮ ಲೋಕದ ಕದವನ್ನು ಮಾತ್ರ ತಟ್ಟಿ ಹಿಂದೆ ಹೆಜ್ಜೆ ಇಟ್ಟಿವೆ. ಇಲ್ಲಿನ ಕಥೆಗಳಲ್ಲಿ ಮಾರುಕಟ್ಟೆಯ ಕ್ರೌರ್ಯವು ಹಣ್ಣಾಗಿದೆಯಾದರೂ ಪ್ರೇಮವು ಹೂವಾಗಲೊಲ್ಲದು. ಮಾರುಕಟ್ಟೆಯ ಜಗತ್ತಿನ ಅಮಾನುಷ ಲೋಕವು ಅವರ ಕಥನ ಕ್ರಮವನ್ನು ಇನ್ನಿಲ್ಲದಂತೆ ಆವರಿಸಿಕೊಂಡಿದೆ. ಇಲ್ಲಿನ ಬಹುತೇಕ ಕಥೆಗಳ ಯಶಸ್ಸಿನಲ್ಲಿ ಅವರ ಭಾಷೆಯ ಸಮ್ಮೋಹಕ ಗುಣದ ಪಾಲು ಕೂಡ ಇದೆ.

ಈ ಕಥೆಗಳು ಬುದ್ಧನ ತತ್ವಗಳನ್ನೂ, ವಚನಗಳ ತಿಳಿವಳಿಕೆಯನ್ನೂ, ತತ್ವಪದಗಳ ಅನುಭಾವಿಕತೆಯನ್ನೂ ಅಲ್ಲಲ್ಲಿ ಒಳಗು ಮಾಡಿಕೊಂಡಿವೆ. ಇವು ಪರೋಕ್ಷವಾಗಿ ಇಲ್ಲಿನ ಕಥೆಗಳ ವೈಚಾರಿಕ ಪ್ರಜ್ಞೆಯನ್ನು ರೂಪಿಸಿವೆ. ಪಾತ್ರಗಳು ನೈತಿಕ ಸಂಕಟ ಪಡುವುದಕ್ಕೂ, ಇವುಗಳ ವೈಚಾರಿಕ ಆವರಣಕ್ಕೂ ಸಂಬಂಧವಿದೆ. ಅಂತರರಾಷ್ಟ್ರೀಯ ಮಾರುಕಟ್ಟೆ ಹಾಗು ಸ್ಥಳೀಯ ಅನುಭಾವಿಕ ಧಾರೆಗಳ ಮುಖಾಮುಖಿಯು ಕಥೆಗಳ ಒಳಗಿನ ಲೋಕದ ಕರ್ಷಣವನ್ನು ತೀವ್ರಗೊಳಿಸಿವೆ. ಇಲ್ಲಿನ ಕಥೆಗಳು ಒಂದು ಹೊಸ ಜಗತ್ತನ್ನು ಕಟ್ಟಿಕೊಂಡಿವೆ. ಅದರೊಳಗೇನೆ ಉಸಿರಾಡುತ್ತಿವೆ. ಅದರದೇ ಆದ ಅನುಭವ, ಕಾಲ, ವಸ್ತು, ಪಾತ್ರಗಳು ಇಂಥ ಜಗತ್ತನ್ನು ಮುನ್ನಡೆಸಿವೆ. ಹೀಗಾಗಿ ಇವು ನಮ್ಮ ಪ್ರಜ್ಞೆಗೆ ಸರಳವಾಗಿ ಇಳಿಯುವುದಿಲ್ಲ. ನಾವೇ ಕಥೆಗಳ ಪ್ರಜ್ಞೆಗೆ ಇಳಿಯಬೇಕು. ಮಹಾಂತೇಶ ನವಲಕಲ್‌ರ ಕಥೆಗಳು ಸಾಧಾರಣತೆಯನ್ನು ಮೀರಿ ಇಲ್ಲಿಯ ಬದುಕನ್ನು ಕಾಣಿಸುತ್ತಿರುವುದರಿಂದ ಅವು ಕನ್ನಡದ ಮುಖ್ಯ ಕಥೆಗಳಾಗಿ ನಿಲ್ಲುತ್ತವೆ.

●